## ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಅಧಿಕಾರಿಗಳಿಗಾಗಿ ಅಂತರ ರಾಜ್ಯ ಪ್ರವಾಸ

ರಾಜ್ಯದ ಅನೇಕ ಸೌಹಾರ್ದ ಸಹಕಾರಿಗಳ ಕೋರಿಕೆಯ ಮೇರೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಅಧಿಕಾರಿಗಳಿಗಾಗಿ ಅಂತರ ರಾಜ್ಯ ಪ್ರವಾಸ ಕಾರ್ಯಕ್ರಮಗಳನ್ನು ವ್ಯವಸ್ಥೆಮಾಡಲು ತೀರ್ಮಾನಿಸಿದೆ. ಪ್ರಾಯೋಗಿಕವಾಗಿ ಒಂದನೆ ತಂಡದ ಕಾರ್ಯಕ್ರಮವನ್ನು ಜುಲೈ 2014 ಕೊನೆಯ ವಾರದಲ್ಲಿ ಗೋವಾ ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳ ಉತ್ತಮ ಸಹಕಾರಿ ಸಂಸ್ಥೆಗಳಿಗೆ ಹಾಗೂ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ವ್ಯವಸ್ಥೆ ಮಾಡಲಾಗುವುದು.ವಿವರಗಳು ಈ ರೀತಿ ಇವೆ :

**ಗೋವಾ ಮಹಾರಾಷ್ಟ್ರ ಹಾಗೂ ಗುಜರಾತ್ ಅಧ್ಯಯನ ಪ್ರವಾಸದ ವಿವರಗಳು**

ಪ್ರವಾಸದ ಅವಧಿ 10 ದಿನಗಳು ಭಾಗವಹಿಸುವ ಸಹಕಾರಿಗಳ ಸಂಖ್ಯೆ : 30 (ಮೊದಲು ಬಂದವರಿಗೆ ಮೊದಲು ಆದ್ಯತೆ ನಂತರ ಬಂದವರಿಗೆ 2ನೇ ತಂಡದಲ್ಲಿ ಸೇರಿಸಲಾಗುವುದು.) ಪ್ರವಾಸ 2 ಥ 2 ಸೀಟಿಂಗ್ ವ್ಯವಸ್ಥೆಯಿರುವ ಪುಶ್ ಬ್ಯಾಕ್ ಇರುವ ಲಕ್ಸುರಿ ಬಸ್, 2 ಊಟ, 1 ಉಪಾಹಾರ, 2 ಕಾಫೀ/ಟಿ. ಸಾಮಾನ್ಯವಸತಿ ವ್ಯವಸ್ಥೆ. ಸಾಮೂಹಿಕ ಭೋಜನ ವ್ಯವಸ್ಥೆ ಮಾಡಲಾಗುವುದು. ಪ್ರವಾಸ ಶುಲ್ಕ ತಲಾ ಒಬ್ಬರಿಗೆ ರೂ 15,000/– (ಪ್ರವಾಸ ಮುಗಿದ ನಂತರ ಒಟ್ಟಾರೆ ವೆಚ್ಚವನ್ನು ಕೂಡಿದಾಗ ಈಗ ನಿಗದಿಮಾಡಿರುವುದಕ್ಕಿಂತ ಹೆಚ್ಚುವರಿ ವೆಚ್ಚವಾದಲ್ಲಿ ಪ್ರವಾಸದಲ್ಲಿ ಭಾಗವಹಿಸಿದ ಸೌಹಾರ್ದ ಸಹಕಾರಿಗಳು ಭರಿಸಬೇಕಾಗುತ್ತದೆ.) ದಿನಾಂಕ ನಿಗದಿಯಾದ ನಂತರ ಪ್ರವಾಸದಲ್ಲಿ ಭಾಗವಹಿಸುವ ಸಹಕಾರಿಗಳಿಗೆ ಸೂಚನೆ ನೀಡಲಾಗುವುದು.

**ಕೇರಳ ಮತ್ತು ತಮಿಳನಾಡು ರಾಜ್ಯಗಳ ಅಧ್ಯಯನ ಪ್ರವಾಸ ವಿವರಗಳು.**

ಪ್ರವಾಸದ ಅವಧಿ 7 ದಿನಗಳು ಭಾಗವಹಿಸುವ ಸಹಕಾರಿಗಳ ಸಂಖ್ಯೆ : 30 (ಮೊದಲು ಬಂದವರಿಗೆ ಮೊದಲು ಆದ್ಯತೆ ನಂತರ ಬಂದವರಿಗೆ 2ನೇ ತಂಡದಲ್ಲಿ ಸೇರಿಸಲಾಗುವುದು.) ಪ್ರವಾಸ 2 x 2ಸೀಟಿಂಗ್ ವ್ಯವಸ್ಥೆಯಿರುವ ಪುಶ್ ಬ್ಯಾಕ್ ಇರುವ ಲಕ್ಸುರಿ ಬಸ್, 2 ಊಟ, 1 ಉಪಾಹಾರ, 2 ಕಾಫೀ/ಟಿ. ಸಾಮಾನ್ಯ ವಸತಿ ವ್ಯವಸ್ಥೆ. ಸಾಮೂಹಿಕ ಭೋಜನ ವ್ಯವಸ್ಥೆ ಇರುತ್ತದೆ. ಪ್ರವಾಸ ಶುಲ್ಕ ತಲಾ ಒಬ್ಬರಿಗೆ ರೂ 10,000/– (ಪ್ರವಾಸ ಮುಗಿದ ನಂತರ ಒಟ್ಟಾರೆ ವೆಚ್ಚವನ್ನು ಕೂಡಿದಾಗ ಈಗ ನಿಗದಿಮಾಡಿರುವುದಕ್ಕಿಂತ ಹೆಚ್ಚುವರಿ ವೆಚ್ಚವಾದಲ್ಲಿ ಪ್ರವಾಸದಲ್ಲಿ ಭಾಗವಹಿಸಿದ ಸೌಹಾರ್ದ ಸಹಕಾರಿಗಳು ಭರಿಸಬೇಕಾಗುತ್ತದೆ.) ದಿನಾಂಕ ನಿಗದಿಯಾದ ನಂತರ ಪ್ರವಾಸದಲ್ಲಿ ಭಾಗವಹಿಸುವ ಸಹಕಾರಿಗಳಿಗೆ ಸೂಚನೆ ನೀಡಲಾಗುವುದು.

ಪ್ರವಾಸದಲ್ಲಿ ಭಾಗವಹಿಸಲು ಅಪೇಕ್ಷಿಸುವವರಿಗೆ ನೊಂದಣೆ ಪತ್ರವನ್ನು ಕಳುಹಿಸಲಾಗುವುದು ಈ ಪತ್ರದಲ್ಲಿ ಪ್ರತಿನಿಧಿಗಳು ತಮ್ಮ ಎಲ್ಲ ವಿವರ ಹಾಗೂ ಭಾವಚಿತ್ರವನ್ನು ಲಗತ್ತಿಸಿ ಕಳುಹಿಸುವುದು. ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಕೋರಿದೆ. ನೊಂದಣೆಯನ್ನು ಮಾಡಲು ಕೊನೆಯ ದಿನಾಂಕ 30.06.2014. ಹೆಚ್ಚಿನ ಮಾಹಿತಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಕೋರಿದೆ.